ಕರ್ನಾಟಕ ಸರ್ಕಾರ

ಕಾಲೇಜು ಶಿಕ್ಷಣ ಇಲಾಖೆ

ಸಂಖ್ಯೆ: ಕಾಶಿಇ/ವಿಯೋ/24/ಕೌಶಲ್ಯಭಾಗ್ಯ/2017-18 ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ, ಬೆಂಗಳೂರು, ದಿನಾಂಕ:22-02-2018.

# ಸುತ್ತೋಲೆ

ವಿಷಯ: ಕೌಶಲ್ಯ ಭಾಗ್ಯ-ಪೂರ್ವಕಲಿಕೆಯನ್ನು ಗುರುತಿಸುವ ಕೌಶಲ್ಯಾಭಿವೃದ್ಧಿ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುವ ಬಗ್ಗೆ.

ಉಲ್ಲೇಖ: ಸರ್ಕಾರದ ಪತ್ರ ಸಂಖ್ಯೆ:ಕೆವಿಟಿಎಸ್‌ಡಿಸಿ/ಕೌಶಲ್ಯಭಾಗ್ಯ/ವಿವ-32/2017-18 ದಿನಾಂಕ:20-02-2018.

********

ಮೇಲ್ಕಂಡ ವಿಷಯ ಮತ್ತು ಉಲ್ಲೇಖಕ್ಕೆ ಸಂಬಂಧಿಸಿದಂತೆ ಕೌಶಲ್ಯ ಭಾಗ್ಯ-ಪೂರ್ವ ಕಲಿಕೆಯನ್ನು ಗುರುತಿಸುವ ಕೌಶಲ್ಯಾಭಿವೃದ್ಧಿ ಕಾರ್ಯಕ್ರಮವನ್ನು ಜಿಲ್ಲಾ ಕೌಶಲ್ಯ ಮಿಷನ್ ವತಿಯಿಂದ ಎಲ್ಲ 177 ತಾಲ್ಲೂಕುಗಳಲ್ಲಿ ಏಕಕಾಲದಲ್ಲಿ ನಡೆಸಲು ಜಿಲ್ಲಾಧಿಕಾರಿಗಳು/ಜಿಲ್ಲಾ ಕೌಶಲ್ಯ ಅಧಿಕಾರಿಗಳು ನಿರ್ದೇಶಿತರಾಗಿದ್ದು, ಈ ಸಂಬಂಧವಾಗಿ (1) ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ (2) ಪದವಿಪೂರ್ವ ಕಾಲೇಜು (3) ಪದವಿ ಕಾಲೇಜು ಮತ್ತು (4) ವಿಶ್ವವಿದ್ಯಾಲಯಗಳಲ್ಲಿ 03 ಸುತ್ತುಗಳಲ್ಲಿ ದಿನಾಂಕ:26-27 ನೇ ಫೆಬ್ರವರಿ 2018, ದಿನಾಂಕ:03-04 ನೇ ಮಾರ್ಚ್ 2018 ಮತ್ತು 08 ಮಾರ್ಚ್ 2018 ರಿಂದ 11ನೇ ಮಾರ್ಚ್ 2018ರವರೆಗೆ ಸಾಯಂಕಾಲ 03-00 ರಿಂದ 06-00 ರವರೆಗೆ ಶಿಬಿರಗಳನ್ನು ನಡೆಸಲು ಉದ್ದೇಶಿಸಲಾಗಿದೆ. ರಾಜ್ಯದ ಯುವಜನತೆಯ ಕೌಶಲ್ಯವನ್ನು ವರ್ಧಿಸುವ ಧ್ಯೇಯವನ್ನು ಹೊಂದಿರುವ ಈ ಕಾರ್ಯಕ್ರಮವನ್ನು ಸನ್ಮಾನ್ಯ ಮುಖ್ಯಮಂತ್ರಿಗಳು ದಿನಾಂಕ:26-02-2018ರಂದು ಉದ್ಘಾಟಿಸಲಿದ್ದಾರೆ.

ಈ ಸಂಬಂಧವಾಗಿ ಎಲ್ಲ ಪ್ರಾದೇಶಿಕ ಜಂಟಿ ನಿರ್ದೇಶಕರು ತಮ್ಮ ವಲಯದ ಜಿಲ್ಲಾಧಿಕಾರಿಗಳು/ಜಿಲ್ಲಾ ಕೌಶಲ್ಯ ಅಧಿಕಾರಿಗಳನ್ನು ಕೂಡಲೇ ಸಂಪರ್ಕಿಸಿ, ಸದರಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಲು ಅಗತ್ಯವಾದ ಎಲ್ಲ ಸೌಲಭ್ಯ ಮತ್ತು ಸಹಕಾರಗಳನ್ನು ನೀಡುವಂತೆ ಸೂಚಿಸಲಾಗಿದೆ. ಎಲ್ಲ ಪ್ರಾದೇಶಿಕ ಜಂಟಿ ನಿರ್ದೇಶಕರು ತಮ್ಮ ವಲಯಗಳಲ್ಲಿನ ಕಾಲೇಜುಗಳ ಪ್ರಾಂಶುಪಾಲರಿಗೂ ಈ ಮಾಹಿತಿ ನೀಡಿ ಅವರು ಸದರಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಲು ಪೂರ್ಣಪ್ರಮಾಣದ ಸಹಕಾರ ನೀಡುವಂತೆ ಮತ್ತು ಕೆಳಕಂಡ ಕರ್ತವ್ಯಗಳನ್ನು ತಪ್ಪದೆ ನೆರವೇರಿಸುವಂತೆ ಸೂಚನೆ ಮತ್ತು ಮಾರ್ಗದರ್ಶನಗಳನ್ನು ನೀಡುವಂತೆ ಸೂಚಿಸಲಾಗಿದೆ:

1) ಸೂಚಿತ ದಿನಾಂಕಗಳಂದು ಕೌಶಲ್ಯಭಾಗ್ಯ-ಪೂರ್ವ ಕಲಿಕೆಯನ್ನು ಗುರುತಿಸುವ ಕಾರ್ಯಕ್ರಮವನ್ನು ಯಶಸ್ವಿಯಾಗಿ ನಡೆಸಲು ಕಾಲೇಜಿನ ಒಬ್ಬ ಅಧ್ಯಾಪಕರನ್ನು ಕಾಲೇಜಿನ ಹಂತದ ಸಮನ್ವಯಾಧಿಕಾರಿಗಳನ್ನಾಗಿ ನೇಮಿಸುವುದು.
2) ಸದರಿ ಕಾರ್ಯಕ್ರಮದ ಶಿಬಿರಗಳಲ್ಲಿ ಭಾಗವಹಿಸುವ ವಿದ್ಯಾರ್ಥಿಗಳ ಹಾಜರಾತಿಯನ್ನು ತಪ್ಪದೆ ತೆಗೆದುಕೊಂಡು, ಪ್ರತಿ ಶಿಬಿರದ ನಂತರ ವಿದ್ಯಾರ್ಥಿಗಳ ಸಮಯ ವ್ಯರ್ಥವಾಗದಂತೆ ಎಚ್ಚರವಹಿಸಿ ಕಾರ್ಯಕ್ರಮದ ಕುರಿತು ಅವರಿಂದ ಹಿಮ್ಮಾಹಿತಿ ಪಡೆಯುವುದು.

3) ತಮ್ಮ ವಲಯದ ಜಂಟಿ ನಿರ್ದೇಶಕರೊಂದಿಗೆ ಸಂಪರ್ಕದಲ್ಲಿದ್ದು, ಕಾರ್ಯಕ್ರಮವನ್ನು ಯಶಸ್ವಿಗೊಳಿಸಲು ಅಗತ್ಯವಾದ ಎಲ್ಲ ನೆರವನ್ನು ನೀಡುವುದು.

ಸೂಚಿತ ಜವಾಬ್ದಾರಿಯನ್ನು ಅತಿ ಜರೂರು ಎಂದು ಪರಿಗಣಿಸಿ ಜಂಟಿ ನಿರ್ದೇಶಕರು ಮತ್ತು ಪ್ರಾಂಶುಪಾಲರು ಕಾರ್ಯಪ್ರವೃತ್ತರಾಗುವಂತೆ ಸೂಚಿಸಲಾಗಿದೆ. ಕಾರ್ಯಕ್ರಮ ಪೂರ್ಣಗೊಂಡ ನಂತರ ಈ ಕುರಿತ ವಿವರವಾದ ವರದಿಯನ್ನು ಜಂಟಿ ನಿರ್ದೇಶಕರು ತಮ್ಮ ಸಹಿಯೊಡನೆ ಇಲಾಖೆಯ ವಿಶೇಷ ಯೋಜನೆ ವಿಭಾಗಕ್ಕೆ ಸಾಫ್ಟ್ (naipunyanidhi.dce@gmail.com) ಗೆ ಇ-ಮೇಲ್ ಮೂಲಕ ಮತ್ತು ಹಾರ್ಡ್ ಪ್ರತಿಗಳಲ್ಲಿ ಕಳುಹಿಸಿಕೊಡಬೇಕಾಗಿ ಸೂಚಿಸಲಾಗಿದೆ.

ಕಾಲೇಜು ಶಿಕ್ಷಣ ಆಯುಕ್ತರು

**ಇವರಿಗೆ:**

ಜಂಟಿ ನಿರ್ದೇಶಕರು, ಪ್ರಾದೇಶಿಕ ಕಛೇರಿ, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು, ಮೈಸೂರು, ಮಂಗಳೂರು, ಶಿವಮೊಗ್ಗ, ಧಾರವಾಡ ಮತ್ತು ಕಲ್ಬುರ್ಗಿ – ಮಾಹಿತಿ ಮತ್ತು ಅಗತ್ಯ ಕ್ರಮಕ್ಕಾಗಿ

**ಪ್ರತಿಯನ್ನು:**

1) ನಿರ್ದೇಶಕರು, ಕರ್ನಾಟಕ ಕೌಶಲ್ಯ ಮಿಷನ್, ಕೌಶಲ್ಯಭವನ, ಡೈರಿವೃತ್ತ, ಬನ್ನೇರುಘಟ್ಟರಸ್ತೆ, ಬೆಂಗಳೂರು – 560029ರವರ ಮಾಹಿತಿ & ಅಗತ್ಯಕ್ರಮಕ್ಕಾಗಿ
2) ಎಲ್ಲ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳಿಗೆ – ಅಗತ್ಯ ಕ್ರಮಕ್ಕಾಗಿ
3) ಮಾಹಿತಿ ಅಧಿಕಾರಿಗಳು, ಮಾಹಿತಿ ತಂತ್ರಜ್ಞಾನ ವಿಭಾಗ, ಕಾಶಿಇ, ಬೆಂಗಳೂರು – ಇಲಾಖಾ ವೆಬ್‌ಸೈಟಿನಲ್ಲಿ ಪ್ರಕಟಿಸಲು
4) ಕಛೇರಿ ಪ್ರತಿ